# ಕೆ.ಸಿ.ಡಿ. ಸಮಾಚಾರ

ಬದುಕಿನ ಹಾದಿಯಲ್ಲಿ ಬರವಣಿಗೆಯ ತೋರಣ

## ಅಂತರ್ ಮಹಾವಿದ್ಯಾಲಯ ಯುವಜನೋತ್ಸವ 2016-17

ದಿನಾಂಕ : 08-11-2016, ಸೋಮವಾರ | ಕರ್ನಾಟಕ ಕಾಲೇಜು ಧಾರವಾಡ : ಬಿ. ಎ. ಪತ್ರಿಕೋದ್ಯಮ ವಿದ್ಯಾರ್ಥಿಗಳ ವಾರ ಪತ್ರಿಕೆ | ವಿಶೇಷ ಸಂಚಿಕೆ : 7


# ಕಲೆಗಳನ್ನು ಪೋಷಿಸುವಲ್ಲಿ ಯುವಜನೋತ್ಸವಗಳು ಮಹತ್ವದ ಪಾತ್ರವಹಿಸಿವೆ : ಡಾ.ಜೆ.ಎಂ.ನಾಗಯ್ಯ



ಆಧುನಿಕತೆಯ ಭರಾಟೆಯಲ್ಲಿ ಇಂದಿನ ದೇಶಿಯ ಕಲೆಗಳು ನಾಶವಾಗುತ್ತಿದ್ದು, ಯುವಜನೋತ್ಸವದಂತಹ ಕಾರ್ಯಕ್ರಮಗಳು ಕಲೆಗಳನ್ನು ಪೊಷಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ ಎಂದು ಕರ್ನಾಟಕ ವಿಶ್ವವಿದ್ಯಾಲಯದ ಜಿಮಖಾನಾ ಅಧ್ಯಕ್ಷರಾದ ಪ್ರೊ. ಜೆ. ಎಂ. ನಾಗಯ್ಯ ಅಭಿಪ್ರಾಯ ಪಟ್ಟರು. ಅವರು ಕರ್ನಾಟಕ ಕಾಲೇಜಿನ ಬಯಲು ರಂಗಮಂದಿರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ವಾಪ್ತಿಯ ಪ್ರಥಮ ವಲಯದ ಯುವಜನೋತ್ಸದ ಸಮಾರೋಪ ಸಮಾರಂಭವನ್ನು ಉದ್ದೇಶಿ ಮಾತನಾಡಿದರು. ಪತ್ರಿಯೊಬ್ಬ ವಿದ್ಯಾರ್ಥಿಯು ಜೀವನದಲ್ಲಿ ಸೋಲು ಗೆಲುವನ್ನು ಸಮಾನವಾಗಿ ಸ್ವಿಕರಿಸಿ ಮುನ್ನಡೆಯಬೇಕು ಎಂದ ಅವರು ಇಂದಿನ ಯುವ ಜನತೆಯಲ್ಲಿ ಸಾಂಸ್ಕೃತಿಕ ಪರಂಪರೆ ಕಡಿಮೆ ಯಾಗುತ್ತಿದ್ದು, ಅದನ್ನು ಉಳಿಸಿ ಬೆಳಸಬೇಕಾದರೆ ಶಿಕ್ಷಣ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳು ಕಲೆಗಳನ್ನು ಪೂಷಿಸುವಲ್ಲಿ ಯುವಜನೋತ್ಸವದಂತಹ ಕಾರ್ಯಕ್ರಮಗಳನ್ನು ಸಂಘಟಿಸಬೇಕು ಎಂದರು. ಕಾರ್ಯಕ್ರಮದಲ್ಲಿ ಕರ್ನಾಟಕ ವಿಜ್ಞಾನ ಕಾಲೇಜಿನ ಪ್ರಾಚಾರ್ಯರಾದ ಸಿ. ಎಫ್ ಮೂಲಿಮನಿ, ಕರ್ನಾಟಕ ಸಂಗೀತ ಮಹಾವಿದ್ಯಾಲಯದ ಎಂ .ಎಸ್ ತರಲಗಟ್ಟಿ ಉಪ ಪ್ರಾಚಾರ್ಯರಾದ ಡಾ. ರಾಜೇಶ್ವರಿ ಮಹೇಶ್ವರಯ್ಯ ಯುವಜನೋತ್ಸವದ ಸಂಘಟನಾ ಕಾರ್ಯದರ್ಶಿಗಳಾದ ಡಾ. ವಿ. ಶಾರದಾ ಮತ್ತು ಅರುಣಾ ಹಳ್ಳಿಕೇರಿ ಹಾಜರಿದ್ದರು. ಡಾ ಬಿ.ಎಸ್ ಭಜಂತ್ರಿ ಕಾರ್ಯಕ್ರವನ್ನು ನಿರೂಪಿಸಿದರು ಡಾ ವಿ ಶಾರದಾ ವಂದಿಸಿದರು.

# ರಂಗೇರಿಸಿದ ಜಾನಪದ ವಾದ್ಯ ಸ್ಪರ್ಧೆ





ಡೊಳ್ಳು, ಜಗ್ಗಲಿಗೆ, ಚಂಡೆ, ತಾಳಗಳ ಸದ್ದು ಪ್ರೇಕ್ಷಕರನ್ನು ಮಂತ್ರ ಮುಗ್ದರನ್ನಾಗಿಸಿದ್ದವು. ಆದರೂ ಜಾನಪದ ವಾದ್ಯಗಳ ನಾದ-ಕ್ಕೆ ಅದೇಷ್ಟೋ ಯುವ ಮನಸ್ಸುಗಳು ಕುಣಿಯತೊಡಗಿದ್ದವು.
ಹೌದು, ಕರ್ನಾಟಕ ಕಾಲೇಜಿನಲ್ಲಿ ನಡೆದ ಪ್ರಥಮ ವಲಯಮಟ್ಟದ ಯುವಜನೋತ್ಸವದ ಜಾನಪದ ವಾದ್ಯ ಸ್ಪರ್ದೆಯಲ್ಲಿ ನಡೆದ ಪ್ರಸಂಗವಿದು. ಎರಡು ಕಾಲೇಜುಗಳ ತಂಡಗಳು ಮಾತ್ರ ಭಾಗವಹಿಸಿದ್ದರೂ ಸಹ ಮನೋರಂಜನೆಯ ಕೊರತೆ ಕಾಣಲಿಲ್ಲ. ತಲೆಗೆ ರುಮಾಲು ಮತ್ತು ತಿರುವು ಮೀಸೆಯ ಅಲಂಕಾರ ಮಾಡಿಕೊಂಡಿದ್ದ ಯುವಕರು ಚರ್ಮವಾದ್ಯಗಳನ್ನು ಮತ್ತು ಇಳಕಲ್ ಸೀರೆಯನ್ನುಟ್ಟ ಯುವತಿಯರು ತಾಳಗಳನ್ನು ಭಾರಿಸಿ ಗಮನಸೆಳೆದರು. ಈ ಸ್ಪರ್ದೆಯನ್ನು ನೋಡಿದಾಗ ಯುವಕರಿಗೂ ಇಂತಹ ಜಾನಪದ ಕಲೆಗಳ ಮೇಲೆ ಎಷ್ಟು ಆಸಕ್ತಿ ಇದೆ ಎನ್ನುವುದು ತಿಳಿಸಿಕೊಡುವಂತಿತ್ತು. ಕರ್ನಾಟಕದ ಚರ್ಮವಾದ್ಯಗಳಾದ ಡೊಳ್ಳು, ಜಗ್ಗಲಿಗೆ, ಚಂಡೆಗಳನ್ನು ತಾಳಬದ್ಧವಾಗಿ ಭಾರಿಸಿ ವೇದಿಕೆಯಲ್ಲಿ ನೆರೆದಿದ್ದವರನ್ನು ಮನರಂಜಿಸಿದರು. ಈ ಕುಣಿತಗಳ ನಡುವೆ "ಮೈಲಾರಿ ಮೈಲಾರಿ" ಎಂಬ ಕೂಗಿನೊಂದಿಗೆ ನಾಯಕ ತಂಡದ ಸದಸ್ಯರಿಗೆ ಎಚ್ಚರಿಕೆ ಕೊಡುತ್ತಿರುವುದನ್ನು ಗಮನಿಸಿದ ಪ್ರೇಕ್ಷಕರು ಮೈಲಾರಿ ಎಂಬ ಕೂಗಿಗೆ ಸಾಥ್ ನೀಡಿ ಮನರಂಜನೆ ತೆಗೆದುಕೊಳ್ಳುತ್ತಿರುವುದು ಕಾಣಿಸಿತು. ಹಲವಾರು ಸಾಹಸಮಯ ಭಂಗಿಗಳನ್ನು ನಾವು ಜಾನಪದವನ್ನು ಮರೆತಿಲ್ಲ, ಮರೆಯುವುದಿಲ್ಲ ಎಂದು ಹೇಳುತ್ತಿರುವಂತೆ ಗತ್ತಿನಿಂದ ಪ್ರದರ್ಶಿಸಿದರು.
ಸ್ಪರ್ದೆಯ ನಿರ್ಣಾಯಕರಾಗಿ ಶ್ರೀ ಬಸಲಿಂಗ ಹಿರೇಮಠ, ಶ್ರೀಮತಿ ವಿಶ್ವೇಶ್ವರಿ ಹಿರೇಮಠ, ಡಾ.ರಾಮು ಮುಲಗಿ ಕಾರ್ಯನಿರ್ವಹಿಸಿದರು. ಡಾ. ಬಿ.ಎಸ್.ಭಜಂತ್ರಿ, ಸ್ಟೆನ್ಲಾ ಸ್ಟೀವನ್ ಸ್ಪರ್ದೆಯನ್ನು ನಿರ್ವಹಿಸಿದರು.

**ಶ್ರೀಹರಿ**
**ಬಿ.ಎ ದ್ವಿತಿಯ ವರ್ಷ**

# ಮುದ ನೀಡಿದ ಶಾಸ್ತ್ರೀಯ ನೃತ್ಯ ಸ್ಪರ್ದೆ





ಭರತ ನಾಟ್ಯದ ವಿವಿಧ ಭಂಗಿಗಳ ಮೂಲಕ ವಿದ್ಯಾರ್ಥಿಗಳು ತಮ್ಮ ಶಾಸ್ತ್ರೀಯ ನೃತ್ಯವನ್ನು ಪ್ರದರ್ಶಿಸಿದರು. ಈ ಸ್ಪರ್ಧೆಯು ಕರ್ನಾಟಕ ಕಲಾ ಮಹಾ ವಿದ್ಯಾಲಯದ ಪ್ರವಾಸೋಧ್ಯಮ ವಿಭಾಗದಲ್ಲಿ ನಡೆಯಿತು . ವಿದ್ಯಾರ್ಥಿಗಳು ತಮ್ಮ ನೃತ್ಯದ ಮೂಲಕ ವಿವಿಧ ಹಾವ ಭಾವ ಭಂಗಿಗಳ ಮೂಲಕ ಉತ್ತಮ ಪ್ರದರ್ಶನ ನೀಡಿದರು. ವಿವಿಧ ಕಾಲೆಜುಗಳಿಂದ ಭಾಗವಹಿಸಿದ ವಿದ್ಯಾರ್ಥಿಗಳು ಸಮಾರಂಭಕ್ಕೆ ಕಳೆತಂದಿದ್ದರು. ಡಾ ಸುಕನ್ಯಾ ಜಾಲಿಹಾಳ ಸ್ಪರ್ಧೆಯ ಉಸ್ತುವಾರಿಯನ್ನು ವಹಿಸಿದ್ದರು. ಶ್ರೀ ರಾಜು ಟೋಣಪಿ ಮತ್ತು ಶ್ರೀಮತಿ ಜೋತಿ ತೀರ್ಪುಗಾರರಾಗಿ ಆಗಮಿಸಿದ್ದರು.

**ಕೆ. ಆರ್ ಚೈತ್ರ**
**ಬಿ.ಎ ಪ್ರಥಮ ವರ್ಷ**

# ಸಂಪಾದಕೀಯ ತಂಡ..




ಗೌರವ ಸಂಪಾದಕರು: ಡಾ. ಎಸ್.ಎಸ್.ಕಟ್ಟಿಮನಿ, ಸಂಚಿಕೆ ಸಂಪಾದಕರು: ಡಾ. ಪ್ರಭಾಕರ್ ಕಾಂಬಳೆ, ಡಾ.ಈಶ್ವರ್ ಗೌಡ ಪಾಟೀಲ್, ವಿದ್ಯಾರ್ಥಿ ಸಂಪಾದಕರು: ಸುನೀಲ, ಲಕ್ಷ್ಮೀ, ಕನಕ ಲಕ್ಷ್ಮಿ, ಶ್ರೀಹರಿ, ನಿತಿನ. ಶೆಟ್ಟಿ, ಕೆ.ಆರ್. ಚೈತ್ರಾ, ಗಿರಿಜಾ.ಬೆಳ್ಳಕ್ಕಿ, ರವಿ.ನಾಯ್ಕ್, ಪೂಜಾ.ಬಿ, ನಿಂಗಪ್ಪ.ಎಂ..